ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು) :

ಅ) ಬಂದಿದೆ.

ಆ) ಯೋಜನೆ ಅಯವ್ಯಯದಲ್ಲಿ ಹಣದ ಕೊರತೆ, ಇದ್ದು ಮತ್ತು ತುಮಕೂರು ಜಿಲ್ಲಾ ಪರಿಷತ್ತಿನಿಂದ ಸೂಕ್ತ ಪ್ರಸ್ತಾವನೆ ಬಾರದಿದ್ದುದರಿಂದ ಹುಳಿಯಾರು ಗ್ರಾಮಕ್ಕೆ ಹೆರಿಗೆ ಆಸ್ಪತ್ರೆ ಇದುವರೆಗೂ ಮಂಜೂರಾಗಿರುವುದಿಲ್ಲ.

ಇ) ಇಲ್ಲ. ಆದರೆ ಅದನ್ನು ಪರಿಶೀಲಿಸಲಾಗುವುದು.

ಕುಣಿಗಲ್‌ನಲ್ಲಿ ಸಾರ್ವಜನಿಕರ ಗ್ರಂಥಾಲಯದ ಬಗ್ಗೆ.

1516 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಸಾರ್ವಜನಿಕ ಗ್ರಂಥಾಲಯವಿದೆಯೆ?

ಆ) ಹಾಗಿದ್ದಲ್ಲಿ, ಮೇಲ್ಕಂಡ ಗ್ರಂಥಾಲಯದಲ್ಲಿರುವ ಪುಸ್ತಕಗಳ ಸಂಖ್ಯೆ ಎಷ್ಟು?

ಇ) 1990ರ ಜನವರಿಯಿಂದ ಡಿಸೆಂಬರ ಅಂತ್ಯದವರೆಗೆ ಸೇರ್ಪಡೆಯಾದ ಹೊಸ ಪುಸ್ತಕಗಳ ಸಂಖ್ಯೆ ಎಷ್ಟು?

ಈ) ಕುಣಿಗಲ್ ತಾಲ್ಲೂಕಿಗೆ ಸಂಚಾರಿ ಗ್ರಂಥಾಲಯ ವಾಹನವನ್ನು ಒದಗಿಸಲಾಗಿದೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಕುಣಿಗಲ್‌ನಲ್ಲಿ ಶಾಖಾ ಗ್ರಂಥಾಲಯವಿದೆ.

ಆ) 6474

ಇ) 225.

ಈ) ಇಲ್ಲ.

ಬೆಂಗಳೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವ ಅಂಗವಾಗಿ ವಿವಿಧೋದ್ದೇಶ ಸಭಾಂಗಣ ನಿರ್ಮಾಣ.

1509 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಅಂಗವಾಗಿ ನಿರ್ಮಿಸಲಿರುವ ಸಣ್ಣ ಸಮ್ಮೇಳನ ಸಭಾಂಗಣವನ್ನು ಒಳಗೊಂಡ ವಿವಿಧೋದ್ದೇಶ ಸಭಾಂಗಣ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಧನ ಸಹಾಯ ನೀಡಿದೆಯೇ?

ಆ) ಹಾಗಿದ್ದಲ್ಲಿ ಧನ ಸಹಾಯದ ಮೊತ್ತವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ, (ಶಿಕ್ಷಣ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ವಿ.ವಿ. ನಿಲಯವು ಬೆಂಗಳೂರಿನಲ್ಲಿರುವ ತನ್ನ ಬಾಹ್ಯ ಪರೀಕ್ಷಾ ಕೇಂದ್ರವನ್ನು ರದ್ದು ಪಡಿಸುವುದು.

1508 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?